ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ?

2. ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ? ಈ ಯೋಜನೆ ಪೂರ್ಣಗೊಂಡು ಎಂದಿನಿಂದ ಕುಡಿಯುವ ನೀರನ್ನು ಒದಗಿಸಲಾಗುವುದು?

3. ಈ ಯೋಜನೆಗೆ ಅಂದಾಜು ಮೊತ್ತವೆಷ್ಟು? ಪ್ರತಿ ದಿನಕ್ಕೆ ಎಷ್ಟು ಗ್ಯಾಲನ್ ನೀರನ್ನು ಪೂರೈಸಲಾಗುವುದು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

1. ಈ ಯೋಜನೆಗೆ 328.50 ಲಕ್ಷ ರೂ.ಗಳ ಅಂದಾಜು ಮಂಜೂರಾಗಿರುತ್ತದೆ. ಈ ಯೋಜನೆಗೆ ಮೇ 1996ರವರೆಗೆ ರೂ.39.40 ರೂ.ಗಳನ್ನು ವೆಚ್ಚ ಮಾಡಲಾಗಿದೆ.

2. ಯೋಜನೆಯ ವಿವಿಧ ಘಟಕಗಳ ಹಂತ ಈ ಕೆಳಗಿನಂತಿದೆ:-

ಎ) 17.61 ಕಿ.ಮೀ. ಉದ್ದದ 375 ಮಿ.ಮೀ. ವ್ಯಾಸದ ಕಚ್ಚಾ ನೀರಿನ ಏರು ಕೊಳವೆ ಮಾರ್ಗಕ್ಕಾಗಿ 2.50 ಕಿ.ಮೀ. ಕೊಳವೆಗಳು ಸರಬರಾಜಾಗಿದೆ. ಅಳವಡಿಸುವ ಕೆಲಸ ಪ್ರಗತಿಯಲ್ಲಿದೆ.

ಬಿ) 2.00 ಲಕ್ಷ ಗ್ಯಾಲನ್ ಮೇಲ್ಮಟ್ಟದ ಜಲಸಂಗ್ರಹಾಗಾರದ ಕೆಲಸವು ಪ್ರಗತಿಯಲ್ಲಿದೆ.

ಸಿ) ಮೂಲ ಸ್ಥಾವರದ ಕೆಲಸಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಕೆಲಸವನ್ನು ಸಧ್ಯದಲ್ಲೇ ಪ್ರಾರಂಭಿಸಲಾಗುವುದು.

ಡಿ) ಶುದ್ಧೀಕರಣಾಗಾರಕ್ಕೆ ಟೆಂಡರನ್ನು ಕರೆಯಲಾಗಿದೆ.

ಯೋಜನೆಯನ್ನು 1998-99ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

3. ಈ ಯೋಜನೆಯ ಅಂದಾಜು ಮೊತ್ತ ರೂ.328.50 ಲಕ್ಷಗಳು. ಈ ಯೋಜನೆಯು ಕಾರ್ಯಗತವಾದ ಮೇಲೆ ಪ್ರತಿ ತಲಾ ದಿನಂಪ್ರತಿ ತಲಾ 115 ಲೀಟರ್ (25 ಗ್ಯಾಲನ್) ನೀರನ್ನು ಪೂರೈಸಬಹುದಾಗಿದೆ.

ವಿಷಯ:- ವಿಜಾಪುರ ಜಿಲ್ಲೆ ನಂದಿ ಸಹಕಾರಿ ಸಕ್ಕರೆ ಗಿರಣಿಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 495 (45)

ಶ್ರೀ ಬಸವಗೌಡ ರಾ.ಪಾಟೀಲ (ವಿಜಾಪುರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಗಲಗಲಿಯ ನಂದಿ ಸಹಕಾರಿ ಸಕ್ಕರೆ ಗಿರಣಿಯು ರೈತರಿಗೆ

ಕೊಡುವ ಪ್ರತಿ ಟನ್ ಕಬ್ಬಿನ ಬೆಲೆ ಏನು?

ಆ) ಸದರಿ ಗಿರಣಿಯ ಆಡಳಿತ ಮಂಡಳಿಯ ರೈತರ ಕಬ್ಬು ನುರಿಸುವಲ್ಲಿ ತಾರತಮ್ಯ ಧೋರಣೆಯನ್ನು ಅನುಸರಿಸುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಇ) ಸದರಿ ಗಿರಣಿಯು ಪ್ರಾರಂಭವಾದಾಗಿನಿಂದ ಈವರೆಗೆ ಲಾಭ ನಷ್ಟದ ವಿವರ ನೀಡುವುದು (ಅಂಕಿ ಅಂಶದ ಸಹಿತ)

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) 1995-96ರ ಹಂಗಾಮಿನಲ್ಲಿ ಪ್ರತಿ ಟನ್ನಿಗೆ 500 ರೂ.ನಂತೆ ಮುಂಗಡವಾಗಿ ಬೆಲೆ ಪಾವತಿಸಿದೆ.

ಆ) ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಲಾಭ ಗಳಿಸಿರುವುದಿಲ್ಲ. ಕಾರ್ಖಾನೆಯು ಪ್ರಾರಂಭವಾದಾಗಿನಿಂದ ಅನುಭವಿಸಿದ ನಷ್ಟದ ವಿವರಗಳು ಈ ಕೆಳಗಿನಂತಿವೆ

1992-93	-	87.18 ಲಕ್ಷ ರೂ.
1993-94	-	17.31 ಲಕ್ಷ ರೂ.
1994-95	-	31.06 ಲಕ್ಷ ರೂ.

ದಿನಾಂಕ 31-3-95ಕ್ಕೆ ಅನುಭವಿಸಿದ ಕ್ರೋಢೀಕೃತ ನಷ್ಟ 135.55 ಲಕ್ಷ ರೂ.

ವಿಷಯ:- ಹಾವೇರಿ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬೆಳೆದ ಕಬ್ಬಿನ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 496 (153)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದ ಕಬ್ಬಿನ ಪ್ರಮಾಣ ಎಷ್ಟು?

ಆ) ಕಾರ್ಖಾನೆ ಪ್ರಾರಂಭವಾದಾಗಿನಿಂದ ದಿನಾಂಕ 15-6-96ರವರೆಗೆ ಎಷ್ಟು ದಿನ ಕಬ್ಬು ಅರೆದಿದೆ ಹಾಗೂ ಅರೆದ ಕಬ್ಬಿನ ಪ್ರಮಾಣ ಎಷ್ಟು?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು):-

ಅ) 1995-96ನೇ ಸಾಲಿನಲ್ಲಿ ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ 3,11,000 ಮೆ.ಟನ್ ಕಬ್ಬು ಬೆಳೆಯಲಾಗಿದೆ.